ಸಚಿವರು ಆಸ್ಪತ್ರೆಗೆ ಬಂದು ಅಲ್ಲಿ ವಿಚಾರ ಮಾಡಿ ಒಂದು ತೀರ್ಮಾನ ಮಾಡಿದ್ದಾರೆ, ಅದು ಸರಿ. ಆದರೆ ನನಗೆ ಗೊತ್ತಿರುವ ಹಾಗೆ ಅಲ್ಲಿರುವ ಡಿ.ಎಂ.ಇ ಹಾಗೂ ಸರ್ಕಾರದಲ್ಲಿ ಇರುವ ಕಾರ್ಯದರ್ಶಿಗಳ ಜೊತೆಯಲ್ಲಿ ಸರಿಯಾಗಿ ಹೊಂದಾಣಿಕೆ, ನನಗೆ ಗೊತ್ತಿರುವ ಪ್ರಕಾರ ಇಲ್ಲ ಎಂದು ಕೇಳಿದ್ದೇನೆ. ಆ ರೀತಿ ಇದ್ದರೆ ತಕ್ಷಣ ಸರ್ಕಾರದ ಗಮನಕ್ಕೆ ಬರುತ್ತಿತ್ತು. ಈ ಉಪಕರಣಗಳು ಕೆಟ್ಟಿದ್ದರೂ ಸಹ ಏತಕ್ಕೆ ಸುಮ್ಮನೆ ಕುಳಿತಿದ್ದರು. I am making a direct allegation that at the D.M.E. and the Secretary level there is no co-orporation or co-ordination with hospital authorities. You have taken the hospital authorities very lightly. I want an answer on that point. When they have asked for a service contract, the Government sits on it. If that is the case, how do you serve the patients ?

ಶ್ರೀ ಜಿ. ರಾಮಕೃಷ್ಣ : ಹೊಂದಾಣಿಕೆ ಇಲ್ಲ ಎನ್ನತಕ್ಕ ಮಾತನ್ನು ನಾನು ಒಪ್ಪುವುದಿಲ್ಲ. ಹೊಂದಾಣಿಕೆ ಇಲ್ಲದಿದ್ದರೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ. ಹೊಂದಾಣಿಕೆ ಅಲ್ಲಿ ಇದೆ. ಅದಕ್ಕೆ ಹೆಚ್ಚು ಹಣ ತಗಲುತ್ತದೆ. ಡಿ.ಎಂ.ಇ.ಯವರಿಗಾಗಲೀ ಅಥವಾ ಸುಪರಿಂಡೆಂಟ್‌ರವರಿಗಾಗಲೀ ಇದನ್ನು ಮಾಡಲು ಆಗುವುದಿಲ್ಲ. ಇದನ್ನು ಸರ್ಕಾರವೇ ಮಾಡಬೇಕಾಗುತ್ತದೆ. ಆದ್ದರಿಂದ ಸಂಬಂಧ ಪಟ್ಟವರಿಗೆ ಹೇಳಿದ್ದೇನೆ. ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ ಕೂಡಲೇ ರಿಪೇರಿ ಮಾಡಿಸಿ ಎಂದು ಆದೇಶ ನಾನು ನೀಡಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಸರ್ವಿಸ್ ಕಾಂಟ್ರ್ಯಾಕ್ಟ್ ಇದೆ .....

ಅಧ್ಯಕ್ಷರು : ಅವರು ಭೇಟಿ ಕೊಟ್ಟು ಸರಿ ಮಾಡಿಸಲು ಆದೇಶ ನೀಡಿದ್ದೇನೆ ಎಂದು ಹೇಳಿದ್ದಾರೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ದಿನಾಂಕ 3.3.1993 ರ ಲಿಖಿತ ಮೂಲಕ ಉತ್ತರಿಸುವ 11ನೇ ಪಟ್ಟಿಯಲ್ಲಿರುವ 54 ಪ್ರಶ್ನೆಗಳ ಸಂಖ್ಯೆ : 1208, 1318, 1198, 1190, 1196, 1316, 1317, 1319, 1191, 566, 893, 356, 355, 1139, 1092, 1193, 960, 1185, 1064, 1066, 1063, 780, 425, 1201, ಮತ್ತು 1200. ಪ್ರಶ್ನೆಗಳನ್ನು ಹೊರತು ಪಡಿಸಿ, ಇನ್ನು ಉಳಿದ 28 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

<u>ಪ್ರಶ್ನೋತ್ತರ ಕಾಲ ಮುಗಿಯಿತು.</u>

ವಿಷಯ : ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ ಮತ್ತು ವಿದ್ಯಾತರಬೇತಿ ಕೇಂದ್ರಗಳ ಸ್ಥಾಪನೆ.

1266

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ ಶಿಕ್ಷಕರಿಗೆ ತರಬೇತಿ ನೀಡಲು ಕೇಂದ್ರ ಸರ್ಕಾರದ ನೆರವಿನಿಂದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ ಮತ್ತು ವಿದ್ಯಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆಯೇ?

ಆ) ಸ್ಥಾಪಿಸಿದ್ದಲ್ಲಿ, ಎಲ್ಲೆಲ್ಲಿ ಸ್ಥಾಪಿಸಲಾಗಿದೆ? (ವಿವರ ನೀಡುವುದು)

ಇ) ಇವುಗಳಿಗೆ ಪ್ರಾಂಶುಪಾಲರನ್ನು ನೇಮಕ ಮಾಡಲಾಗಿದೆಯೇ? ಹಾಗಿದ್ದಲ್ಲಿ, ಅವರ ಹೆಸರು ವಿದ್ಯಾರ್ಹತೆ, ಸೇವಾ ಅನುಭವದ ವಿವರ ಕೊಡುವುದು?

ಈ) ಈ ಅನುಭವ ಮತ್ತು ಶೈಕ್ಷಣಿಕ ಅರ್ಹತೆಗಳು ಕೇಂದ್ರ ಸರ್ಕಾರದವರು ನಿಗದಿಪಡಿಸಿರುವ ಗುಣಮಟ್ಟಕ್ಕೆ ಸಮನಾಗಿದೆಯೇ? ಕೇಂದ್ರ ಸರ್ಕಾರ ನಿಗದಿಪಡಿಸಿರುವ ಗುಣಮಟ್ಟದ ವಿವರ ತಿಳಿಸುವುದು?

ಡಾ ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) 1. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮೈಸೂರು.
2. - ,, - , ಬೆಳಗಾಂ.
3. - ,, - , ಗುಲ್ಬರ್ಗಾ

1. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.
2. - ,, - , ತುಮಕೂರು.
3. - ,, - , ಮೈಸೂರು.
4. - ,, - , ಮಂಗಳೂರು.
5. - ,, - , ಧಾರವಾಡ.
6. - ,, - , ಇಲ್ಕಲ, ಬಿಜಾಪುರ ಜಿಲ್ಲೆ.
7. - ,, - , ಕಮಲಾಪುರ, ಗುಲ್ಬರ್ಗಾ ಜಿಲ್ಲೆ.
8. - ,, - , ಯರಮರಸ್,ರಾಯಚೂರು ಜಿಲ್ಲೆ.

ಇ) ನೇಮಕ ಮಾಡಲಾಗಿದೆ.
ಸೇವಾ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ಈ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕರ ಹುದ್ದೆಗಳನ್ನು ತುಂಬಲು ಭಾರತ ಸರ್ಕಾರವು ಕೆಲವು ಅರ್ಹತೆಗಳನ್ನು ಸಲಹೆ ಮಾಡಿದೆ. ಈ ಸಲಹೆಗಳನ್ನು ರಾಜ್ಯ ಸರ್ಕಾರದ ಅಗತ್ಯತೆಗಳಿಗೆ ಅಳವಡಿಸಿಕೊಳ್ಳಲು ಒಂದು ವಿಶೇಷ ಸಮಿತಿ ರಚಿಸಲಾಗುವುದು. ಡಯರ್ : ಸಿಯಟ್ ಕಾರ್ಯಕ್ರಮಗಳನ್ನು ತುರ್ತಾಗಿ ಜಾರಿಗೊಳಿಸುವ ಉದ್ದೇಶದಿಂದ ಈ ಹುದ್ದೆಗಳನ್ನು ಸೂಕ್ತವಾದ ಇಲಾಖಾ ಅಧಿಕಾರಿಗಳಿಂದ ತುಂಬಲಾಗಿದೆ.

ವಿಧಾನ ಸಭೆ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1266 ಕ್ಕೆ ಅನುಬಂಧ.

೫) ಸೇವಾ ವಿವರಗಳು.

ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳು

ಕ್ರಮ ಸಂಖ್ಯೆ	ಮಹಾವಿದ್ಯಾಲಯ	ಪ್ರಾಚಾರ್ಯರ ಹೆಸರು	ವಿದ್ಯಾರ್ಹತೆ	ಸೇವಾ ವಿವರ (ವರ್ಷಗಳು)
1.	ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮೈಸೂರು	ಶ್ರೀ ಯು. ಆರ್. ಐತಾಳ್,	ಬಿ .ಎಸ್‌ಸಿ., ಎಂ.ಎ., ಬಿಎಡ್	33
2.	ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ,	ಶ್ರೀ ವಿ. ಎನ್. ಜೋಷಿ	ಬಿ.ಎಸ್‌ಸಿ., ಎಂಎಡ್.	23
3.	ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಗುಲ್ಬರ್ಗ	ಶ್ರೀ ಗೋಪಾಲ್, ಶೇರೆಗಾರ್,	ಬಿ.ಎ., ಬಿಎಡ್., ಎಲ್.ಎಲ್.ಬಿ.	23

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.

1.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ,	ಶ್ರೀ ಟಿ.ಎಂ. ಕುಮಾರ್,	ಬಿ.ಎಸ್‌ಸಿ., ಬಿಎಡ್., ಎಲ್.ಎಲ್.ಬಿ.	20
2.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು	ಕೆ.ಎನ್. ಅಶೋಕ್ ಕುಮಾರ್	ಬಿ.ಎಸ್‌ಸಿ(ಹಾನರ್ಸ್) ಎಂ.ಎಸ್‌ಸಿ., ಬಿಎಡ್.	22
3.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು	ಪಿ. ಈಶ್ವರಭಟ್	ಎಂ.ಎ., ಬಿಎಡ್.,	20
4.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಗಳೂರು	ಪಿ. ವೆಂಕಟರಮಣ	ಎಂ.ಎ., ಬಿಎಡ್.,	30
5.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ	ಜಿ.ಎಲ್. ಹೆಗಡೆ	ಎಂ.ಎ., ಬಿಎಡ್.,	20
6.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಲ್ಕಲ, ಬಿಜಾಪುರ ಜಿಲ್ಲೆ.	ಎ.ಎಸ್. ಬಳಗನೂರ	ಎಂ.ಎ., ಬಿಎಡ್.,	20
7.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕಮಲಾಪುರ, ಗುಲ್ಬರ್ಗ ಜಿಲ್ಲೆ.	ಯು. ಪ್ರಭು	ಬಿ.ಎಸ್‌ಸಿ., ಬಿಎಡ್.,	20
8.	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಯರಮರಸ್, ರಾಯಚೂರು ಜಿಲ್ಲೆ.	ಕೆ.ಎಂ. ಶಂಕರ-ನಾರಾಯಣ ಭಟ್	ಬಿ.ಎಸ್‌ಸಿ., ಬಿಎಡ್.,	20

ವಿಷಯ : ಮೈಸೂರು ನಗರದಲ್ಲಿ ಸರಕಾರದಿಂದ ಪ್ರಾರಂಭಿಸಲ್ಪಟ್ಟ ಹೊಸ ಕಾಲೇಜುಗಳು.